ಅಸಲು ದಾವಾ ಸಂಖ್ಯೆಃ-161/2016

ಪಿ.ಡಬ್ಲ್ಯೂ:- 1-ಇಂದ್ರಮ್ಮ

ದಿನಾಂಕಃ **30-07-2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು**:-** ಪ್ರತಿವಾದಿ ನಂ**.1** ರಿಂದ **3** ಮತ್ತು **5** ರವರ ಪರ ವಕೀಲರಾದ ಶ್ರೀ.ಬಿ ಯು ವಕೀಲರಿಂದ**:-**

1. ಗಿರಿಯಪ್ಪ ನನ್ನ ತಂದೆ ಇದ್ದು, ಅವರಿಗೆ 1.ಗೌರಮ್ಮ, 2. ಶಾರದಮ್ಮ, 3. ಕಮಲಮ್ಮ, 4. ಮಂಜುನಾಥ, 5. ಇಂದ್ರಮ್ಮ ಅಂತ 5 ಜನ ಮಕ್ಕಳಿರುತ್ತೇವೆ ಎಂದರೆ ಸರಿ. ಈ ದಾವೆಯ ದಾವಾ ಆಸ್ತಿಗಳುನಮ್ಮ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ. ಅವುಗಳ ಕುರಿತು ಈ ದಿನದವರೆಗೂ ನಮ್ಮ ಮದ್ಯೆ ಯಾವುದೇ ಕಾನೂನುಬದ್ಧ ಪಾಲು ವಿಭಾಗ ಆಗಿರುವುದಿಲ್ಲ ಎಂದರೆ ಸರಿ.

2. ಅದೇ ರೀತಿ ದಿಃ 15-12-2012 ಮತ್ತು 22-05-2015 ರಂದು ನಮ್ಮ ಸಹೋದರನಾದ 4 ನೇ ಪ್ರತಿವಾದಿಯು ಮಾಡಿಕೊಟ್ಟಿರುವ ಕ್ರಯ ಪತ್ರ ಮತ್ತು ವಿಭಾಗ ಪತ್ರದ ಕುರಿತು ನನ್ನದಾಗಲೀ, ಪ್ರತಿವಾದಿ ನಂ.1 ರಿಂದ 3 ಮತ್ತು 5 ರವರದ್ದಾಗಲೀ ಒಪ್ಪಿಗೆ ಪಡೆದುಕೊಂಡಿಲ್ಲ ಎಂದರೆ ಸರಿ. ಆ ಕಾರಣ ಆ ಕ್ರಯ ಪತ್ರ ಮತ್ತು ವಿಭಾಗ ಪತ್ರವು ನನ್ನ ಮೇಲೆ ಮತ್ತು ಪ್ರತಿವಾದಿ ನಂ.1 ರಿಂದ 3 ಮತ್ತು 5 ರವರ ಮೇಲೆ ಬಾಂದಾಯಿಸುವುದಿಲ್ಲ ಎಂದರೆ ಸರಿ.

3. ದಾವಾ ಆಸ್ತಿಗಳಲ್ಲಿ ನನಗೆ ಇರುವಂತೆ ಪ್ರತಿವಾದಿ ನಂ.1 ರಿಂದ 3 ಮತ್ತು 5 ರವರಿಗೂ ಸಹ ಸಮನಾದ ಹಕ್ಕು ಇರುತ್ತದೆ ಎಂದರೆ ಸರಿ. 4 ನೇ ಪ್ರತಿವಾದಿಗೆ ಆ ಕ್ರಯ ಪತ್ರ ಮತ್ತು ವಿಭಾಗ ಪತ್ರ ಮಾಡಿಕೊಳ್ಳಲು ಯಾವುದೇ ಕಾನೂನುಬದ್ಧ ಹಕ್ಕು ಇರಲಿಲ್ಲ ಎಂದರೆ ಸರಿ.

<u>ಪಾಟೀ ಸವಾಲು**:-** ಪ್ರತಿವಾದಿ ನಂ**.4** ರವರ ಪರ ವಕೀಲರಾದ ಶ್ರೀ.ಹೆಚ್ ಜಿ ಎಸ್ ವಕೀಲರಿಂದ**:-**</u>

ಪ್ರತಿವಾದಿ ನಂ.1 ರಿಂದ 3 ಮತ್ತು 5 ರವರ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.

<u>ಪಾಟೀ ಸವಾಲು**:-** ಪ್ರತಿವಾದಿ ನಂ**.6** ಮತ್ತು **7** ರವರ ಪರ ವಕೀಲರಾದ ಶ್ರೀ.ಎಸ್ ಎನ್ ಪಿ ವಕೀಲರಿಂದ**:-**</u>

1. ಈ ದಾವೆಯ 6 ನೇ ಪ್ರತಿವಾದಿಯು 4 ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ. 7 ನೇ ಪ್ರತಿವಾದಿಯು 6 ನೇ ಪ್ರತಿವಾದಿಯ ತಂದೆ ಎಂದರೆ ಸರಿ. 4 ನೇ ಪ್ರತಿವಾದಿಯ 2 ನೇ ಹೆಂಡತಿಯ ಹೆಸರು ಸವಿತಾ ಅಂತ ಇರುತ್ತದೆ. ಸದರಿ ಸವಿತಾ ಮತ್ತು 4 ನೇ ಪ್ರತಿವಾದಿಯ ದಾಂಪತ್ಯದಿಂದ ಧನುಷ್ ಮತ್ತು ಪೂರ್ವಿಕಾ ಅಂತ ಇಬ್ಬರು ಮಕ್ಕಳು ಜನಿಸಿರುತ್ತಾರೆ. ಸದರಿ 4 ನೇ ಪ್ರತಿವಾದಿಯ ಮಕ್ಕಳಾದ ಧನುಷ್ ಮತ್ತು ಪೂರ್ವಿಕಾ ಇವರನ್ನು ಈ ದಾವೆಯಲ್ಲಿ ನಾವು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

2. ನನ್ನ ತಂದೆ ಗಿರಿಯಪ್ಪನಿಗೆ 7 ಜನ ಸಹೋದರರು ಎಂದರೆ ಸರಿ. ಅವರ ಪೈಕಿ ನನ್ನ ದೊಡ್ಡಪ್ಪನಾದ ಲಕ್ಷ್ಮಣ್ ಈತನಿಗೆ ಕೃಷ್ಣಮೂರ್ತಿ ಅಂತ ಮಗನಿರುತ್ತಾನೆ ಎಂದರೆ ಸರಿ. ಸದರಿ ಕೃಷ್ಣಮೂರ್ತಿ ಇವರು ಹೊನ್ನಾಳಿಯ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ನಂ.94/2026 ನೇದನ್ನು ದಾಖಲಿಸಿ ಆತನ ತಂದೆಯ ಸಹೋದರರ ಮದ್ಯೆ ಒಟ್ಟು ಕುಟುಂಬದ ಆಸ್ತಿಗಳಲ್ಲಿ ಪಾಲುವಿಭಾಗ ಆಗದೇ ಇರುವುದರಿಂದ ತನ್ನ ತಂದೆಯ ಪಾಲಿಗೆ ಬರುವ ಜಮೀನುಗಳನ್ನು ಪಾಲುವಿಭಾಗ ಮಾಡಿಕೊಡುವಂತೆ ಕೋರಿ ಆ ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ಪ್ರಕಾರ ದಾವಾ ಆಸ್ತಿಗಳು ಕುರಿತು ಇನ್ನೂ ಸಹ ನಮ್ಮ ತಂದೆಯ ಸಹೋದರರ ಮದ್ಯೆಯೇ ಪಾಲುವಿಭಾಗ ಆಗದೇ ಇರುವುದರಿಂದ ನಮ್ಮ ತಂದೆಯ ಆಸ್ತಿಗಳಲ್ಲಿ ಪಾಲುವಿಭಾಗ ಕೋರಿ ಸಲ್ಲಿಸಿದ ಈ ದಾವೆಯು ಕಾನೂನು ಪ್ರಕಾರ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

3. ಈ ದಾವೆಯ 4 ನೇ ಪ್ರತಿವಾದಿಯು ಆ ದಾವೆಯಲ್ಲಿ 9 ನೇ ವಾದಿ ಇದ್ದು ಮತ್ತು ಈ ದಾವೆಯಲ್ಲಿ ವಿವಾದಿತ ಆಸ್ತಿಗಳೇ ಆ ದಾವೆಯಲ್ಲಿಯೂ ಸಹ ವಿವಾದಿತ ಆಸ್ತಿಗಳಾಗಿರುವುದರಿಂದ ಆ ದಾವೆಯು ಅಧಿವಿಚಾರಣೆಯಾಗುವವರೆಗೆ ಈ ದಾವೆಯು ಕಾನೂನು ಪ್ರಕಾರ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.